1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.64/2024

ದಿಃ 06.06.2025

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-1 Pw-1

| | | |
|---|---|---|
| ಹೆಸರು | ಃ | ಶ್ರೀನಿವಾಸಮೂರ್ತಿ |
| ತಂದೆಯ ಹೆಸರು | ಃ | ಚಿಕ್ಕಹನುಮಯ್ಯ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಕೂಟಗಲ್, ರಾಮನಗರ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ಸಾಕಮ್ಮ ನನ್ನ ಸೋದರತ್ತೆ. ಚಾಸಾ.3 ಮತ್ತು 4ರ ಪರಿಚಯ ನನಗಿದೆ. ಚಾಸಾ.5ರಿಂದ 7 ಸಾಕಮ್ಮನ ಮನೆಯ ಅಕ್ಕ-ಪಕ್ಕದಲ್ಲಿ ವಾಸ ಮಾಡುವವರಾಗಿರುತ್ತಾರೆ. ನಾನು ಹಾಗೂ ಸಾಕಮ್ಮ ಪರಿಶಿಷ್ಟ ಜಾತಿ ಆದಿ ಕರ್ನಾಟಕ ಉಪಜಾತಿಗೆ ಸೇರಿದವರಾಗಿರುತ್ತೇವೆ. ಸಾಕಮ್ಮ ಕೂಟಗಲ್ ಗ್ರಾಮದಲ್ಲಿ ಒಬ್ಬಳೇ ವಾಸ ಮಾಡುತ್ತಿದ್ದರು.

2. ದಿಃ29.01.2024ರಂದು ಸಾಕಮ್ಮ ವಾಸ ಮಾಡುತ್ತಿದ್ದಂತಹ ಗ್ರಾಮದ ಜನರು ಅಂದರೆ ಇಂದ್ರಮ್ಮ ಚಾಸಾ.6 ನನಗೆ ದೂರವಾಣಿ ಕರೆಯ ಮೂಲಕ ಸಾಕಮ್ಮನ ಮೇಲೆ ಯಾರೋ ಕ್ರೌರ್ಯ ಎಸಗಿದ್ದಾರೆ ಎಂದು ತಿಳಿಸಿದರು. ತಕ್ಷಣ ನಾನು ಸಾಕಮ್ಮನ ಮನೆಗೆ

ಹೋಗಿದ್ದು, ಅಲ್ಲಿ ನೋಡಲಾಗಿ ಸಾಕಮ್ಮ ಧರಿಸಿದ್ದಂತಹ ಕುಪ್ಪಸ ಹರಿದಿದ್ದು, ಸೀರೆ ಅಸ್ತವ್ಯಸ್ತವಾಗಿದ್ದು, ಆಕೆಯ ತುಟಿ ಮತ್ತು ಕೆನ್ನೆ ಊದಿಕೊಂಡಿದ್ದು, ಕೆನ್ನೆಯ ಮೇಲೆ ಕಚ್ಚಿದ ಗುರುತುಗಳು ಇತ್ತು. ನಾನು ಸಾಕಮ್ಮನನ್ನು ಕೇಳಿದಾಗ, ಆಕೆ ರಾತ್ರಿ ತಾನು ಮೂತ್ರ ವಿಸರ್ಜನೆಗೆಂದು ಮನೆಯಿಂದ ಹೊರಗೆ ಹೋಗಿ ಒಳಗೆ ಬಂದಾಗ ಮನೆಯ ಒಳಗೆ ಒಬ್ಬ ವ್ಯಕ್ತಿ ಇದ್ದು, ಆತ ಬಲವಂತವಾಗಿ ತನ್ನ ಬಾಯಿಯನ್ನು ಮುಚ್ಚಿ, ಆಕೆಯನ್ನು ಕೆಳಕ್ಕೆ ಕೆಡವಿ, ಹೊಟ್ಟೆಯ ಭಾಗಕ್ಕೆ ತುಳಿದು, ಆಕೆಯ ಮೇಲೆ ಮಲಗಿ ಬಲಾತ್ಕಾರ ಮಾಡಲು ಪ್ರಯತ್ನಿಸಿ, ಬಟ್ಟೆಯನ್ನೆಲ್ಲಾ ಹರಿದು, ತುಟಿ ಮತ್ತು ಕೆನ್ನೆಯ ಮೇಲೆ ಕಚ್ಚಿ ಗಾಯಮಾಡಿ, ದೈಹಿಕ ಕ್ರೌರ್ಯ ಎಸಗಿರುತ್ತಾನೆ ಎಂದು ಸಾಕ್ಷಮ್ಮ ತಿಳಿಸಿದಳು. ಗ್ರಾಮಸ್ಥರಾದ ಇಂದ್ರಮ್ಮ ಮತ್ತು ಚಿಕ್ಕತಾಯಮ್ಮ, ಸಾಕಮ್ಮ ಒಬ್ಬಳೇ ಇರುವುದನ್ನು ತಿಳಿದುಕೊಂಡಂತಹ ಪವನ್ ಕುಮಾರ್ ಎಂಬ ವ್ಯಕ್ತಿ ಈ ಕೃತ್ಯವನ್ನು ಎಸಗಿರುತ್ತಾನೆ ಎಂದು ತಿಳಿಸಿದರು.

3. ಅದೇ ದಿನ ನಾನು ಸಾಕಮ್ಮಳನ್ನು ರಾಮನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅಲ್ಲಿ ಆಕೆಗೆ ಚಿಕಿತ್ಸೆ ಕೊಡಲಾಯಿತು. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆ. ಸದರಿ ದೂರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ

ಗುರುತಿಸಿರುವಂತಹ ದೂರನ್ನು ನಿ.ಪಿ.1 ಹಾಗೂ ಆತನ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಘಟನೆಯ ದಿನದಂದು ಸಾಕಮ್ಮ ಧರಿಸಿದ್ದಂತಹ ಕುಪ್ಪಸವನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದಿರುವಂತಹ ಕುಂಕುಮ ಬಣ್ಣದ ಕುಪ್ಪಸವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

4. ಸಾಕಮ್ಮ ಈಗ ಜೀವಂತವಿಲ್ಲ. ದಿಃ22.12.2024 ರಂದು ಆಕೆ ಮರಣ ಹೊಂದಿರುತ್ತಾಳೆ. ದೂರು ದಾಖಲಾದ ನಂತರ ಪೊಲೀಸರು ದಿಃ30.01.2024 ರಂದು ಸ್ಥಳಕ್ಕೆ ಭೇಟಿ ನೀಡಿ, ಸಾಕಮ್ಮ ತೋರಿಸಿದಂತಹ ಜಾಗದಲ್ಲಿ ಸಂಜೆ ಸುಮಾರು 3.00 ರಿಂದ 4.00 ಗಂಟೆ ಸಮಯದಲ್ಲಿ ಪೊಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರ್‌ಗೆ ಸಾಕಮ್ಮ ನನ್ನ ಸಮಕ್ಷಮದಲ್ಲಿ ತನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಸದರಿ ಮಹಜರ್‌ನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಕ್ರಮ ಜರುಗಿಸಿದ ಸಲುವಾಗಿ ಸ್ಥಳದಲ್ಲಿ ಛಾಯಾಚಿತ್ರವನ್ನು ಪಡೆದಿದ್ದು, ನಾನೂ ಸಹ ಆಗ ಸ್ಥಳದಲ್ಲಿದ್ದೆ. ಸದರಿ ಛಾಯಾಚಿತ್ರಗಳನ್ನು ನೋಡಿದರೆ ಗುರುತಿಸಬಲ್ಲೆ.

ಸಾಕ್ಷಿ ಗುರುತಿಸಿರುವಂತಹ ಛಾಯಾಚಿತ್ರಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ಆರೋಪಿ ಪವನ್ ಕುಮಾರ್ ಬೆಸ್ತರ ಜಾತಿಗೆ ಸೇರಿದವನಾಗಿರುತ್ತಾನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರನ್ನು ಕೂಗಿಸಲಾಯಿತು. ನ್ಯಾಯಾಲಯದಲ್ಲಿ ಗೈರು ಹಾಜರಿರುತ್ತಾರೆ. ಪಾಟೀ ಸವಾಲಿಗಾಗಿ ಯಾವುದೇ ಸಮಯಾವಕಾಶ ಕೋರಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಎಂ.ಪಂಚಾಕ್ಷರಿ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.